ಶ್ರೀ ಮೀರಾಜುದ್ದೀನ್ ಎನ್. ಪಟೇಲ್ : ಸರ್ವೆ ಮಾಡುವ ಸಲುವಾಗಿ ಕಮೀಷನರ್ ಪತ್ರ ಬರೆದಿದ್ದಾರೆ ಆ ಜಾಗ ಕಾರ್ಪೋರೇಷನ್‌ದೆ ಅಥವಾ ಪೋಲೀಸ್ ಇಲಾಖೆಯದೇ ಎಂದು ಗೊತ್ತಾದ ತಕ್ಷಣ ನಾವು ಕ್ರಮ ತೆಗೆದುಕೊಂಡು ರಸ್ತೆ ಮಾಡುವುದು ನಿಂತಿರುವುದನ್ನು ಚಾಲು ಮಾಡಿಸುತ್ತೇವೆ.

xv) ಖಾಸಗಿ ದಂತ ಕಾಲೇಜುಗಳಲ್ಲಿ ಖಾಲಿ ಇರತಕ್ಕ ಸೀಟುಗಳು

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಅಧ್ಯಕ್ಷರೇ, ರಾಜ್ಯದಲ್ಲಿರುವ ಖಾಸಗಿ ದಂತ ಕಾಲೇಜುಗಳಲ್ಲಿ ಸಿಇಟಿ ಸೆಲ್‌ನವರು ತುಂಬಬೇಕಾದ ಸೀಟುಗಳನ್ನು ತುಂಬದೆ ಇರುವ ಕಾರಣಕ್ಕಾಗಿ 74 ಸೀಟು ಖಾಲಿ ಇವೆ. ಈ ಸೀಟುಗಳನ್ನು ತುಂಬಿಕೊಳ್ಳುವುದಕ್ಕೆ ಮ್ಯಾನೇಜ್‌ಮೆಂಟಿನವರು ಸರ್ಕಾರವನ್ನು ಕೇಳಿದ್ದಾರೆ. ಸರ್ಕಾರ ಒಂದು ತೀರ್ಮಾನ ಕೊಟ್ಟಿದೆ ಪೇಮೆಂಟ್ ಸೀಟನ್ನು ತಂಬಿಕೊಳ್ಳಬೇಕಾದರೆ ನೀವು ಸುಪ್ರೀಂಕೋರ್ಟಿನಿಂದ ಡೈರೆಕ್ಷನ್ ತರಬೇಕೆಂದು ಅದಕ್ಕೆ ಕಾರಣ ಏನು ಹೇಳತ್ತಾರೆ ಅಂದರೆ ಎಐಆರ್ 1996 ಸುಪ್ರೀಂಕೋರ್ಟ್ 25 : 52 ಟಿಎಂಎ ಪೈ ವರ್ಸಸ್ ಸ್ಟೇಟ್ ಅಂಡ್ ಆಫ್ ಅದರ್ಸ್ ಎಂಬ ಕೇಸಿನಲ್ಲಿ ಒಂದು ತೀರ್ಮಾನವಾಗಿದೆ, ಅಲ್ಲಿ ತೀರ್ಮಾನವಾಗಿರುವುದು ಇಂಜಿನಿಯರಿಂಗ್ ಕಾಲೇಜುಗಳಿಗೆ ಸಂಬಂಧಪಟ್ಟದ್ದು ಸುಪ್ರೀಂಕೋರ್ಟ್ ಏನು ಹೇಳುತ್ತದೆ ಅಂದರೆ, ಲ್ಯಾಸ್ಟ್ ಪ್ಯಾರ, "Any seats remaining unfulfilled thereafter can be filled by the management of the private engineering colleges on their own in their discretion. This direction shall not apply to medical and dental colleges." ಎಂದಿದೆ ಅದು ಪ್ರೀಸೀಟಿ ಇರಬಹುದು ಪೇಮೆಂಟ್ ಸೀಟೆ ಖಾಲಿ ಇರಬಹುದು, ಸುಪ್ರೀಂಕೋರ್ಟಿನಿಂದ ಡೈರೆಕ್ಷನ್ ತನ್ನಿರಿ ಎಂದು ಒಂದು ಎಂಡಾರ್ಸೆಮೆಂಟ್ ಕೊಡುವುದಕ್ಕೆ ಏನು ತೊಂದರೆ ಇದೆ? ಪೇಮೆಂಟ್ ಸೀಟಿಗೆ ಮಾತ್ರ ಕೊಡುತ್ತಾರೆ. ಆಶ್ಚರ್ಯಕರ ಏನೆಂದರೆ ನಮ್ಮ ವೈದ್ಯಕೀಯ ಸಚಿವರು ಎಲ್ಲೇ ಇದ್ದಾರೆ. ಯಾವುದೋ ಒಂದು ಕಾಲೇಜಿಗೆ ಸಂಬಂಧಿಸಿದಂತೆ ಕಾನೂನು ಇಲಾಕೆಗೆ ಅಭಿಪ್ರಾಯಕ್ಕಾಗಿ ಕಳುಹಿಸಿದ್ದಾರೆ ಆ ಕೇಸಿನಲ್ಲಿ ಪೇಮೆಂಟ್ ಸೀಟ್ ಮಾತ್ರ ಇನ್‌ವಾಲ್ವ್ ಆಗಿರುವುದು, ಅದಕ್ಕೆ ಪೇಮೆಂಟ್ ಸೀಟ್ ತುಂಬ ಬೇಕಾದರೆ ಸುಪ್ರೀಂಕೋರ್ಟಿನಿಂದ ಡೈರೆಕ್ಷನ್ ತನ್ನಿ ಎಂದು ಹೇಳುತ್ತಿದ್ದಾರೆ, ಸೀಟ್ ಯಾವುದೇ ಇರ ಬಹುದು, ಸುಪ್ರೀಂಕೋರ್ಟಿನಿಂದ ಡೈರೆಕ್ಷನ್ ತನ್ನಿ ಎಂದು ಹೇಳಿದರೆ ಹೇಗೆ? ಎರಡೂ ವರ್ಗದ ಸೀಟುಗಳಿಗೆ ಅನ್ವಯವಾಗುವಂತೆ ಸರ್ಕಾರ ಒಂದು ಎಂಡಾರ್ಸ್‌ಮೆಂಟ್ ಕೊಟ್ಟರೆ ಅವರಿಗೆ ಸಹಾಯವಾಗುತ್ತದೆ.

ಡಾ।। ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು) : ಅಧ್ಯಕ್ಷರೆ, ಈ ಸಾಲಿನ ಸಿಇಟಿ ಕೌನ್ಸಿಲಿಂಗ್ ಮುಗಿದ ಮೇಲೆ ಉಳಿದಿರುವ ಸೀಟುಗಳನ್ನು 15 ದಿವಸದ ನಂತರ ಮ್ಯಾನೇಜ್‌ಮೆಂಟ್‌ಗೆ ಕೊಡುವುದು ಹಿಂದಿನಿಂದ ಬಂದಿರುವ ಪದ್ಧತಿ. ಆದರೆ ಮೊನ್ನೆ ಸುಪ್ರೀಂ ಕೋರ್ಟಿನಲ್ಲಿ ಟಿಎಂಎ ಪೈ ಕಡೆಯುವರು ಕೇಸ್ ಹಾಕಿಕೊಂಡಾಗ ಹೇಳಿದ್ದಾರೆ : 15 ದಿವಸ ಆದ ನಂತರ ಸಿಇಟಿ ನೆಲ್ ಆಫೀಸರ್‌ನ್ನು ಡಿಎಂ ಅನ್ನು ಮತ್ತು ಇಂಜಿನಿಯರಿಂಗ್ ಸೀಟುಗಳಿಗೆ ಸಂಬಂಧಿಸಿದ ಅಧಿಕಾರಿಗಳನ್ನು ಕರೆದು ರೀಕೌನ್ಸಿಲಿಂಗ್ ಮಾಡಬೇಕು ಎಂದರೆ, ಏನು ಮಾಡ ಬೇಕೆಂದು ತೀರ್ಮಾನ ತೆಗೆದುಕೊಳ್ಳಬೇಕು ಎಂದು ಹೇಳಿ, ಆ ಸೀಟುಗಳನ್ನು ಮತ್ತೆ ಮ್ಯಾನೇಡ್‌ಮೆಂಟಿಗೆ ಬಿಡಲಿಕ್ಕೆ 8 ದಿವಸದಲ್ಲಿ ಕ್ರಮ ತೆಗೆದುಕೊಳ್ಳಬೇಕೆಂಬ ಆರ್ಡರನ್ನು ಸುಪ್ರೀಂ ಕೋರ್ಟಿನಿಂದ ಕೊಟ್ಟಿದ್ದಾರೆ. ಅದೇತರಹ ಇಲ್ಲಿ ಕಾಗೋಡು ತಿಮ್ಮಪ್ಪನವರು ಹೇಳಿದಂತೆ, "This thing will not apply will not apply for medical and dental college" ಎಂದು ಕೊಟ್ಟಿದ್ದಾರೆ. ನಾಲ್ಕುದಿವಸದ ಹಿಂದೆ ನಾನು ಲಾ ಮಿನಿಸ್ಟರ್ ಜೊತೆ, ಲಾ ಸೆಕ್ರಟರಿ ಮತ್ತು ನಮ್ಮ ಸೆಕ್ರೆಟರಿಗಳನ್ನು ಕರೆದು ಚರ್ಚೆ ಮಾಡಿದಾಗ ಪೇಮೆಂಟ್ ಸೀಟಾಗಲಿ ಫ್ರೀ ಸೀಟಾಗಲಿ ನಾನು ಮ್ಯಾನೇಜ್‌ಮೆಂಟ್‌ನವರಿಗೆ ಬಿಟ್ಟು ಕೊಡುವುದಕ್ಕೆ ಆಗುವುದಿಲ್ಲ ಅವವು ಸುಪ್ರೀಮ್ ಕೋರ್ಟಿಗೆ ಹೋಗಿ ಅಲ್ಲಿಂದ ಆರ್ಡರ್ ತರಬೇಕೆಂದು ಹೇಳಿದ್ದಾರೆ. ಎಂಡಾರ್ಸ್‌ಮೆಂಟ್ ಕೊಡಬೇಕಾದರೆಪೇಮೆಂಟ್ ಸೀಟು ಮಾತ್ರ ಎಂದು ಹೇಳಿದ್ದಾರೆ, ನಾನು ಅಧಿಕಾರಿಗಳನ್ನು ಕರೆದು ಮಾತನಾಡಿದ್ದೇನೆ. ಪೇಮೆಂಟ್ ಸೀಟುಗಳನ್ನೇನಾದರೂ ಸುಪ್ರೀಮ್ ಕೋರ್ಟಿನಿಂದ ಅಂದರೆ ಫ್ರೀ ಸೀಟುಗಳನ್ನು ಮ್ಯಾನೇಜ್‌ಮೆಂಟ್‌ಗೆ ಬಿಡುವುದಕ್ಕೆ ಅಧಿಕಾರ ಇದೆಯೆಂದು ಮತ್ತೆ ಅವರು ಲೀಗಲ್ ಅಭಿಪ್ರಾಯ ತೆಗೆದುಕೊಂಡು ನಾಳೆ ರಜಾ ಇದೆ ನಾಡಿದ್ದು ಫ್ರೀ ಆಗಿರಬಹುದು ಅಥವಾ ಪೇಮೆಂಟ್ ಸೀಟು ಆಗಿರಬಹುದು, ಅವರಿಗೆ ಶನಿವಾರ ಎಂಡಾರ್ಸ್‌ಮೆಂಟ್ ಕೊಡುತ್ತೇವೆ, ಆಮೇಲೆ ಅವರು ಸುಪ್ರೀಮ್ ಕೋರ್ಟಿಗೆ ಹೋಗಲಿ.

16. ಬೀದರ್ ಜಿಲ್ಲಾ ಪಂಚಾಯತಿಯ ಅವ್ಯವಹಾರಗಳು

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ (ಬೀದರ್) : ಅಧ್ಯಕ್ಷರೇ, ನಮ್ಮ ಬೀದರ್ ಜಿಲ್ಲಾ ಪಂಚಾಯತಿಯಲ್ಲಿ ದೊಡ್ಡ ಅವ್ಯವಹಾರವಾಗಿದೆ. ಗ್ರಾಮೀಣಾಭಿವೃದ್ಧಿ ಸಚಿವರು ಕ್ರಮ ತೆಗೆದು ಕೊಂಡಿದ್ದಾರೆ. 4 ಅಧಿಕಾರಿಗಳನ್ನು ಈಗಾಗಲೇ ಸಸ್ಪೆಂಡ್ ಮಾಡಿದ್ದಾರೆ. ಅಲ್ಲಿ ಅವ್ಯವಹಾರ ಮಾಡಿದವರು ಒಂದು ಅಸೋಸಿಯೇಷನ್ ಮಾಡಿಕೊಂಡು ಪೇಮೆಂಟ್ ಮಾಡಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ಇದು ನಮ್ಮ ಗಮನಕ್ಕೂ ಬಂದಿದೆ, ಪತ್ರಿಕೆಗಳಲ್ಲಿ ಹೇಳಿದ್ದೀರಿ, ಸಿಓಡಿ ಎನ್‌ಕ್ವಯರಿ ಮಾಡಿಸುವುದಾಗಿ ಹೇಳಿದ್ದೀರಿ, ಸರ್ಕಾರದಲ್ಲಿ ನನ್ನ ವಿನಂತಿ ಇಷ್ಟೇ, ನಮ್ಮಲ್ಲಿ ಈಗ ಸ್ಕೇರ್ಸಿಟಿ ಪ್ರಾಬ್ಲಂ ಆಗಿದೆ, ಪಂಪ್‌ಸೆಟ್ ಒಂದು ಗಂಟೆಯೂ